ವ್ಯಾಪಾರಿಯೊಬ್ಬನ ಮಗ ತನ್ನ ಮಗಳನ್ನು ಇಷ್ಟಪಟ್ಟು ಮದುವೆಯಾಗುತ್ತೇನೆಂಬ ಸಂದೇಶ ಕೂಡ ಬಂದಿತ್ತು. ಅದನ್ನು ಇನ್ನೂ ತನ್ನ ಮಗಳ ಬಳಿ ಪ್ರಸ್ತಾಪಿಸಿರಲಿಲ್ಲ. ಹಾಗಾಗಿ ಅವಳ ಸ್ವಾತಂತ್ರ್ಯಕ್ಕೂ ಭಾವನೆಗಳಿಗೂ ಧಕ್ಕೆ ಬರದಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದ. ಎಲ್ಲಿ ಹೋದರೂ ಅವಳಿಗೆ ತಿಳಿಯದಂತೆ ಅವಳ ಸುತ್ತಲೂ ಟೈಟ್ ಸೆಕ್ಯುರಿಟಿಯನ್ನು ಏರ್ಪಾಡು ಮಾಡುತ್ತಿದ್ದ. ಚಾಂದ್ ಬಾನು ಗೋಲ್ಕೊಂಡ ಬಳಿ ಸಲೀಂ ಸೀಸಿದ ಗುಂಡು ಎತ್ತುವುದನ್ನು ನೋಡುವುದರಿಂದ ಹಿಡಿದು, ಅವನ ಬಳಿ ಅತ್ತರನ್ನು ಕೊಳ್ಳುವುದು ಮತ್ತು ಹುಣ್ಣಿಮೆಯ ಬೆಳದಿಂಗಳ ರಾತ್ರಿಯಲ್ಲಿ ಅವಳನ್ನು ಸಲೀಂ ಹೊತ್ತು ಕೋಟೆಯ ಮೆಟ್ಟಿಲುಗಳನ್ನು ಇಳಿಯುವವರೆಗೂ ಹಾಗೂ ಅವರು ಆಡಿಕೊಂಡ ಎಲ್ಲಾ ಮಾತುಗಳೂ ಮಹಮ್ಮದ್ ಖಾನನಿಗೆ ಚಾಚೂ ತಪ್ಪದೆ ರವಾನೆಯಾಗಿದ್ದವು. ಹಾಗಾಗಿ ಮಹಮ್ಮದ್ ಖಾನ್ ಬಹಳ ಸೂಕ್ಷ್ಮವಾಗಿ ಮತ್ತು ಜಾಣ್ಮೆಯಿಂದ ಸನ್ನಿವೇಶಗಳನ್ನು ನಿಭಾಯಿಸಿದ್ದ. ಅಂದು ಸಲೀಂ ಬ್ಲೂ ಫಾಕ್ಸ್ ರೆಸ್ಟೋರೆಂಟ್‌ಗೆ ಹೋಗುವಾಗ ಚಾರ್ಮಿನಾರ್ ಬಳಿಯಿಂದಲೂ ಮಹಮ್ಮದ್ ಖಾನನ ಭಂಟರು ಇನ್ನೋವಾ ಕಾರಿನಲ್ಲಿ ಹಿಂಬಾಲಿಸುತ್ತಾ ಕಡೆಗೆ ರಸ್ತೆ ದಾಟುವಾಗ ಸಲೀಮನಿಗೆ ಗುದ್ದಿ, ಅವರೇ ಉಸ್ಮಾನಿಯ ಆಸ್ಪತ್ರೆಗೆ ಸೇರಿಸಿದ್ದರಲ್ಲದೆ ಕೂಡಲೇ ಆಪರೇಷನ್ನಿಗೂ ಏರ್ಪಾಡು ಮಾಡಿದ್ದರು. ಅಲ್ಲದೆ ತಾವು ಮಾಡಿದ ಅಪಘಾತಕ್ಕಾಗಿ ಸಲೀಮನ ತಾಯಿ ಮತ್ತು ಇಬ್ಬರ ತಂಗಿಯರ ಹೆಸರಿನಲ್ಲಿ ಪರಿಹಾರ ಧನವಾಗಿ ತಲಾ ಹತ್ತು ಲಕ್ಷ ರೂಪಾಯಿಗಳನ್ನು ಪೊಲೀಸರ ಮೂಲಕವೇ ತಲುಪಿಸಿದ್ದರು! ಮಹಮ್ಮದ್ ಖಾನ್ ಅದೇ ಚಾರ್ಮಿನಾರ್ ಏರಿಯಾದಲ್ಲಿ ಹುಟ್ಟಿ ಬೆಳೆದು ಇಂದು ಇಷ್ಟೊಂದು ಎತ್ತರಕ್ಕೆ ಬೆಳೆದವನಾಗಿದ್ದರಿಂದ ಸಲೀಮನ ಪ್ರಾಣ ತೆಗೆಯಲು ಯೋಚಿಸಿರಲಿಲ್ಲ. ತನ್ನ ಮಗಳದೇ ತಪ್ಪೆಂದು ಮಹಮ್ಮದ್ ಖಾನನಿಗೆ ತಿಳಿದಿತ್ತು. ಅಂದು ಬ್ಲೂ ಫಾಕ್ಸ್ ರೆಸ್ಟೋರೆಂಟ್‌ನಿಂದ ವಾಪಸ್ಸಾದ ಮಗಳೊಂದಿಗೆ ಸಿನಿಮಾದ ಬಗ್ಗೆ ಮಾತನಾಡಿ ಆ ಬಗ್ಗೆ ಮಾತುಕತೆಯಾಡಲು ಮುಂಬಯಿಗೆ ಕರೆದುಕೊಂಡು ಹೋಗಿ ಮತ್ತೆ ಅಲ್ಲಿಂದ ಲಂಡನ್ನಿಗೂ ಕರೆದುಕೊಂಡು ಹೋಗಿ ಲಂಡನ್ನಿನ ಡೈಮಂಡ್ ವ್ಯಾಪಾರಿಯ ಮಗನನ್ನೂ ಪರಿಚಯಿಸಿದ್ದ! ಇನ್ನೊಂದು ಮುಖ್ಯ ಸಂಗತಿಯೆಂದರೆ ಬೇರೊಂದು ಕತೆಯಿಟ್ಟುಕೊಂಡು ಮಗಳಿಗಾಗಿ ಸಿನಿಮಾ ಮಾಡಬೇಕೆಂದಿದ್ದ ಅವನು ಆ ಕತೆಯನ್ನು ಕೈ ಬಿಟ್ಟು ಸಲೀಂ ಮತ್ತು ಚಾಂದ್ ಬಾನು ನಡುವೆ ನಡೆದ ಮೂರು ದಿನಗಳ ಪ್ರೇಮ ಕತೆಯನ್ನೇ ಸಿನಿಮಾ ಮಾಡಲು ನಿರ್ಧರಿಸಿದ್ದ. ಮತ್ತು ಅದನ್ನೊಂದು ದುರಂತ ಪ್ರೇಮ ಕತೆಯನ್ನಾಗಿ ಹೆಣೆದು ದೊಡ್ಡ ಬಜೆಟ್ಟಿನಲ್ಲಿ ಶೂಟಿಂಗ್ ಶುರುಮಾಡಿಬಿಟ್ಟಿದ್ದ. ಸದ್ಯಕ್ಕೆ ಚಾಂದ್ ಬಾನು ಸಡಗರದ ಕಡಲಲ್ಲಿ ಮುಳುಗಿಬಿಟ್ಟಿದ್ದಾಳೆ. ಇತ್ತ ದುಃಖಾಂತ್ಯವೂ ಅಲ್ಲದ ಅತ್ತ ಸುಖಾಂತ್ಯವೂ ಅಲ್ಲದ ಇಂಥದ್ದೊಂದು ಕತೆಯನ್ನು ಬರೆದದ್ದಕ್ಕೆ ನನಗಂತೂ ಸಮಾಧಾನವಿದೆ. ಮತ್ತೆ ನಿಮಗೆ?...

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕತೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈ ತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.